*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C.:3016/2023
CW- 1 PW-1

ಹೆಸರು : ಶ್ರೀಶೈಲ ಅಂಬಾಟಿ

ತಂದೆ ಹೆಸರು : ಶಾಂತಪ್ಪ ಅಂಬಾಟಿ

ವಯಸ್ಸು : 36 ವರ್ಷ

ಉದ್ಯೋಗ : ಪಿ.ಎಸ್.ಐ. ಮಹಿಳಾ ಪೋಲೀಸ್ ಠಾಣೆ ಕಲಬುರಗಿ

ವಾಸ ಸ್ಥಳ : ಕಲಬುರಗಿ

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 16.02.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2023 ರಿಂದ 2025 ರವರೆಗೆ ಚಿತ್ತಾಪುರ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11.08.2023ರಂದು ಮಧ್ಯಾಹ್ನ 02.15 ಗಂಟೆಗೆ ನಾನು ಪೋಲೀಸ್ ಠಾಣೆಯಲ್ಲಿದ್ದಾಗ ಯರಗಲ್ ಗ್ರಾಮದ ಹನುಮಾನ್ ಗುಡಿಯ ಹತ್ತಿರ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಮಟ್ಕಾ ಆಟ ಆಡಿ ಎಂದು ದೈವಲೀಲೆಯ ಆಟ ಎಂದು ಆಡಿಸುತ್ತಿದ್ದ ಎಂದು ತಿಳಿದು ಬಂತು. ಆದ ಕಾರಣ ಚಾಸಾ-6ರವರಿಗೆ ಕರೆಯಿಸಿ ಚಾಸಾ- 2 ಮತ್ತು 3 ಪಂಚರನ್ನು ಬರಮಾಡಿಕೊಂಡು ನಾನು, ಚಾಸಾ-2 ರಿಂದ 6 ರವರೊಂದಿಗೆ ಇಲಾಖಾ ವಾಹನದಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ತಲುಪಿರುತ್ತೇನೆ. ನಾನು ಬಾತ್ಮಿ ಬಂದ ಸ್ಥಳಕ್ಕೆ ತಲುಪಿ ನೋಡಿದಾಗ ಒಬ್ಬ ವ್ಯಕ್ತಿ ಮಟ್ಕಾ ಜೂಜು ಆಡಿಸುತ್ತಿದ್ದುದು ಕಂಡು ಬಂತು. ಆದ ಕಾರಣ ಸದರಿ ವ್ಯಕ್ತಿ ಸಾರ್ವಜನಿಕ ರಸ್ತೆಯ ಮೇಲೆ ಮಟ್ಕಾ ಆಡಿಸುತ್ತಿದ್ದಾನೆಂದು ಖಚಿತಪಡಿಸಿಕೊಂಡು ದಾಳಿ ಮಾಡಿರುತ್ತೇನೆ. ನಾನು ಮಟ್ಕಾ ಜೂಜು ಆಡಿಸುತ್ತಿದ್ದ ವ್ಯಕ್ತಿಯನ್ನು ಸಿಬ್ಬಂದಿಗಳ ಸಹಾಯದಿಂದ ಹಿಡಿದಿರುತ್ತೇನೆ. ಆಡಲು ಬಂದು ಉಳಿದ ಜನರು ಅಲ್ಲಿಂದ ಓಡಿ ಹೋಗಿದ್ದು ಅವರನ್ನು ಹಿಡಿಯಲು ಪ್ರಯತ್ನಿಸಿದರೂ ಅವರು ಸಿಕ್ಕಿಲ್ಲ. ಹಿಡಿದ ವ್ಯಕ್ತಿಯ ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರುನ್ನು ವಿಜಯಕುಮಾರ್ ತಂದೆ ನಾಗಣ್ಣ ಬೆಣ್ಣೂರ್ ಎಂದು ಹೇಳಿರುತ್ತಾನೆ. ಸದರಿ

ಆರೋಪಿತನ ಅಂಗ ಶೋಧನೆ ಮಾಡಲಾಗಿ ಆತನ ಬಳಿ ವಿವಿಧ ಮುಖಬೆಲೆಯ ರೂ.1,430/- ಹಣ, 2 ಮಟ್ಕಾ ಚೀಟಿ, ಒಂದು ಬಾಲ್ ಪೆನ್ ದೊರೆತಿರುತ್ತದೆ. ಸದರಿ ಮು.ಮಾ. ಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತೇನೆ. ನಂತರ ಆರೋಪಿಯನ್ನು ಮತ್ತು ಜಪ್ತುಪಡಿಸಿಕೊಂಡ ಮು.ಮಾ. ಗಳನ್ನು ಪೋಲೀಸ್ ಠಾಣೆಗೆ ತೆಗೆದುಕೊಂಡು ಬಂದು ಚಾಸಾ-7ರವರಿಗೆ ಸ್ವದೂರನ್ನು ನೀಡಿರುತ್ತೇನೆ .

ಆ ದಿನ ವಶಕ್ಕೆ ಪಡೆದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿತನೇ ಆ ದಿನ ವಶಕ್ಕೆ ಪಡೆದ ಆರೋಪಿಯಾಗಿರುತ್ತಾನೆ.

ಸಾಕ್ಷಿಗೆ ಈಗ ದೂರನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸದರಿ ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 1ಎ ಎಂದು ಗುರುತಿಸಲಾಯಿತು. ಸಾಕ್ಷಿಗ ಈಗ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸದರಿ ಪಂಚನಾಮೆಯನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 2ಎ ಎಂದು ಗುರುತಿಸಲಾಯಿತು. ಆ ದಿನ ಜಪ್ತುಪಡಿಸಿಕೊಂಡ ಮು.ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಬಿಳಿ ಪೊಟ್ಟಣದಲ್ಲಿರುವ ಹಣದ ಲಕೋಟೆಯನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ಈಗ ಸದರಿ ಲಕೋಟೆಯಲ್ಲಿದ್ದ ವಿವಿಧ ಮುಖಬೆಲೆಯ ರೂ.1,430/- ಹಣವನ್ನು ಮು.ಮಾ. 1 ಎಂದು ಗುರುತಿಸಲಾಯಿತು. ಮು.ಮಾ. 1ರ ಮೇಲೆ ಅಂಟಿಸಲಾದ ಚೀಟಿಯನ್ನು ಮು.ಮಾ. 1ಎ ಎಂದು ಗುರುತಿಸಲಾಯಿತು. 2 ಮಟ್ಕಾ ಚೀಟಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. 2 ಎಂದು, ಒಂದು ಬಾಲ್ ಪೆನ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ. 3 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಸಮಯದಲ್ಲಿ ಪಂಚರ ಸಹಿ ಇರುವ ಚೀಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಚೀಟಿಯನ್ನು ಮು.ಮಾ. 4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಮು.ಮಾ. 4ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಮ್.ಟಿ.ಎ. ವಕೀಲರಿಂದ -

ನಾನು ಘಟನಾ ಸ್ಥಳಕ್ಕೆ ತಲುಪಿದಾಗ ಮಧ್ಯಾಹ್ನ ಸುಮಾರು 03 ಗಂಟೆ 10 ನಿಮಿಷ ಆಗಿತ್ತು. ನಾನು ಪೋಲೀಸ್ ಠಾಣೆಯಿಂದ 02.45 ಗಂಟೆಗೆ ಹೊರಟಿರುತ್ತೇನೆ. ನಾನು ಪಂಚರನ್ನು ಪೋಲೀಸ್ ಠಾಣೆಯಲ್ಲಿಯೇ ಬರಮಾಡಿಕೊಂಡಿದ್ದೆ. ನೀವು ಆರೋಪಿಯನ್ನು ವಾಚ್ ಮಾಡುತ್ತಿದ್ದಾಗ ಅಲ್ಲಿ ಸುಮಾರು 2-3 ಜನ ಸೇರಿದ್ದರು. ನಾನು ಆರೋಪಿತನನ್ನು ವಿಚಾರಿಸಿದಾಗ ಆತನ ಕೆಲಸವನ್ನು ಸಹ ಕೇಳಿದ್ದೆ ಆತ ಆಗ ಏನು ಹೇಳಿದ್ದ ಎಂದು ಈಗ ನನಗೆ ನೆನಪಿಲ್ಲ. ನಾನು ಬರಮಾಡಿಕೊಂಡ ಪಂಚರು ಯಾವು ಊರಿನವರೆಂದು ಈಗ ನನಗೆ ನೆನಪಿಲ್ಲ. ನಾನು ನನ್ನ ದೂರಿನಲ್ಲಿ ಹಣದ ಮುಖಬೆಲೆಗಳನ್ನು ನಿಖರವಾಗಿ ನಮೂದು ಮಾಡಿಲ್ಲ ಆದರೆ ಒಟ್ಟಾಗಿ ಹಣದ ಮೊತ್ತವನ್ನು ನಮೂದು ಮಾಡಿರುತ್ತೇನೆ. ನೀವು ಪೋಲೀಸ್ ಠಾಣೆಯಿಂದ ಹೋಗುವ ಮೊದಲೇ ಪ್ರ.ವರ್ತಮಾನ ವರದಿಯನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪೋಲೀಸ್ ಠಾಣಾ ಅಂಕೆ-ಸಂಖ್ಯೆಗೋಸ್ಕರ ಸುಳ್ಳು ದೂರನ್ನು ನೀಡಿ ಆರೋಪಿತ ಯಾವುದೇ ಗುನ್ಹೆ ಮಾಡಿಲ್ಲ ಎಂದು ಗೊತ್ತಿದ್ದರೂ ಸಹ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.